153 ನೇ 6 ನಿ-72 = (110)
300628

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಟಿ.ಎನ್. ಜವರಾಯಿ ಗೌಡ ಇವರು ನಿಯಮ 72ರ ಮೇರೆಗೆ ನೀಡಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ**

**ವಿಷಯ:**

ಬ್ರಾಂಡ್ ಬೆಂಗಳೂರು ಸುಗಮ ಸಂಚಾರ ಪರಿಕಲ್ಪನೆಯಡಿ ರಾಜಧಾನಿ ಬೆಂಗಳೂರು ನಗರದಲ್ಲಿ ರಸ್ತೆಗಳು ಪದೇ ಪದೇ ದುರಸ್ಥಿಗೊಳಗಾಗುತ್ತಿದ್ದು, ಕಿತ್ತು ಬರುತ್ತಿರುವ ಹಿನ್ನಲೆಯಲ್ಲಿ ಶಾಶ್ವತವಾಗಿ ರಸ್ತೆಗಳನ್ನು ನಿರ್ಮಿಸುವ ಸಲುವಾಗಿ 1800 ಕೋಟಿ ರೂ ವೆಚ್ಚದಲ್ಲಿ ಸುಮಾರು 157 ಕಿ.ಮೀ ನಷ್ಟು ವೈಟ್ ಟಾಪಿಂಗ್ ರಸ್ತೆಗಳನ್ನು ನಿರ್ಮಿಸಲು ದಿನಾಂಕ: 15.07.2024 ರಂದು ಚಾಲನೆ ನೀಡಲಾಗಿದೆ ಎಂಬುದರ ಬಗ್ಗೆ ದಿನಾಂಕ: 16.07.2024 ರಂದು ವಿಜಯ ಕರ್ನಾಟಕ ಪತ್ರಿಕೆಯಲ್ಲಿ ವರದಿಯಾಗಿದೆ. ಮೊದಲನೇ ಹಂತದಲ್ಲಿ 19.67 ಕಿ.ಮೀ ವೈಟ್ ಟಾಪಿಂಗ್ ರಸ್ತೆ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದು ಸರ್ಕಾರ ತಿಳಿಸಿದೆ. ಈ ಕಾಮಗಾರಿಗಳನ್ನು ಆಯ್ದ ವಿಧಾನಸಭಾ ಕ್ಷೇತ್ರಗಳಲ್ಲಿ ಮಾತ್ರ ತೆಗೆದುಕೊಳ್ಳಲಾಗಿದೆ ಎಂದು ತಿಳಿದುಬಂದಿದೆ. ಯಶವಂತಪುರ ವಿಧಾನಸಭಾ ಕ್ಷೇತ್ರದಲ್ಲಿ ಹಲವಾರು ಮುಖ್ಯ ರಸ್ತೆಗಳು ಪದೇ ಪದೇ ಕಿತ್ತು ಬರುತ್ತಿದ್ದು, ಪ್ರಮುಖ ರಸ್ತೆಗಳು ಗುಂಡಿ ಬಿದ್ದಿದೆ ಇದರಿಂದ ಸಾರ್ವಜನಿಕ ಸಂಚಾರಕ್ಕೆ ದಕ್ಕೆಯಾಗುತ್ತಿದೆ. ಎಷ್ಟೋ ಪ್ರಕರಣಗಳಲ್ಲಿ ಸಾವು ನೋವುಗಳು ಸಹ ಸಂಭವಿಸಿವೆ. ಆದ್ದರಿಂದ ಯಶವಂತಪುರ ವಿಧಾನಸಭಾ ಕ್ಷೇತ್ರಕ್ಕೆ ಸೇರಿದ ಹತ್ತು ಹಲವಾರು ಪ್ರಮುಖ ರಸ್ತೆಗಳು ಪದೇ ಪದೇ ಗುಂಡಿ ಬೀಳುತ್ತಿದ್ದು, ರಸ್ತೆಗಳು ಕಿತ್ತು ಬಂದಿರುವ ಕಾರಣ ಈ ರಸ್ತೆಗಳನ್ನು ಆಯ್ಕೆ ಮಾಡಿಕೊಂಡು ವೈಟ್ ಟಾಪಿಂಗ್ ರಸ್ತೆ ನಿರ್ಮಾಣ ಮಾಡಲು ಚಾಲನೆ ನೀಡುವ ಬಗ್ಗೆ.

**ಉತ್ತರ:**

ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ವೈಟ್ ಟಾಪಿಂಗ್ ಕಾಮಗಾರಿಯನ್ನು ಅನುಷ್ಠಾನಗೊಳಿಸುವ ಮುಂಚಿತವಾದ ಕಾಮಗಾರಿಗಳಾದ ನೀರಿನ ಕೊಳವೆಯ ಬದಲಾವಣೆ, ಒಳಚರಂಡಿ ಕೊಳವೆಗಳ ಜೋಡಣೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಮೆ॥ ಅಪ್ಪಾಜಿ ಬಿಲ್ಡರ್ಸ್ ರವರಿಗೆ ಟೆಂಡರ್ ಆಧಾರದ ಮೇಲೆ ಕಾರ್ಯಾದೇಶವನ್ನು ದಿನಾಂಕ: 13.03.2024 ರಂದು ನೀಡಲಾಗಿರುತ್ತದೆ. ಯಶವಂತಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರೂ.50.00 ಕೋಟಿ ಮೊತ್ತದಲ್ಲಿ ಕೆಳಕಂಡ ಅಭಿವೃದ್ಧಿ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ.

| Sl No | Name of Work | Length in Kms | Amount Rs. In Lakhs |
|---|---|---|---|
| 1 | Comprehensive development of footpath and white topping to Amma Ashrama road (Yeshwanthapura Constituency) | 1.15 | 1300.00 |
| 2 | Comprehensive development of footpath and white topping to Kengeri from Hoysala Circle to Robin Theatre (6th main road) (Yeshwanthapura Constituency) | 1.11 | 1200.00 |
| 3 | Comprehensive development of footpath and white topping to Tunga nagara main road from Magadi main road to Tunga nagara Circle(Yeshwanthapura Constituency) | 1.26 | 1300.00 |
| 4 | Comprehensive development of footpath and white topping to Pattanagere main road - Mysore road from pattanagere village of Yeshwanthapura Constituency (Yeshwanthapura Constituency) | 1.38 | 1200.00 |
| | **Total** | **4.90** | **5000.00** |

**ಸಂಖ್ಯೆ: ನಅಇ 393 ಎಂಎನ್‌ವೈ 2024 (ಇ)**

**(ಡಿ.ಕೆ. ಶಿವಕುಮಾರ್)**
ಉಪ ಮುಖ್ಯಮಂತ್ರಿ